

# ವಿದುಷಿ ಆಗುವುದೇ ಕನಸು

## ಪ್ರಗತಿ ಬಡಿಗೇರ್

### ಝೀ ಕನ್ನಡ 'ಸರಿಗಮಪ' ಸ್ಪರ್ಧೆಯಲ್ಲಿ ವಿಜೇತೆ

◆ **ನಿಮ್ಮ ಪರಿಚಯ ಹೇಳಿ. ಸಂಗೀತದ ಪ್ರೀತಿ ಹುಟ್ಟಿದ್ದು ಹೇಗೆ?**

ಕುಶಾಲನಗರದ ಸರ್ಕಾರಿ ಪ್ರೌಢಶಾಲೆಯಲ್ಲಿ ಓದುತ್ತಿದ್ದೇನೆ. ಈಗ 9ನೇ ತರಗತಿಗೆ ಹೋಗಬೇಕು. ಐತಿಹಾಸಿಕ ಪಟ್ಟದಕಲ್ಲು ನಮ್ಮೂರು. ನನ್ನ ತಂದೆ ಬಸವರಾಜ ಬಡಿಗೇರ್ ಚಿತ್ರಕಲಾ ಶಿಕ್ಷಕರು. ಅಮ್ಮ ಚಂದ್ರಕಲಾ ಬಡಿಗೇರ್. ಅಪ್ಪನಿಗೆ ಹಾಡುವುದು ಹವ್ಯಾಸ. ಅವರ ಜೊತೆ ನಾವೂ ಹಾಡುತ್ತಿದ್ದೆವು. ಅವರೇ, ನನ್ನ ಹಾಡುಗಾರಿಕೆಯ ಪ್ರೀತಿಗೆ ಮೂಲ ಪ್ರೇರಣೆ ಆದರು. ನಾನು ಸಂಗೀತವನ್ನು ಧನಲಕ್ಷ್ಮಿ ಅವರ ಬಳಿ ಕಲಿಯುತ್ತಿದ್ದೇನೆ. ಅವರು ನನ್ನ ಹವ್ಯಾಸಕ್ಕೆ ಸ್ಪಷ್ಟ ರೂಪು ನೀಡುತ್ತಿದ್ದಾರೆ. ಅಪ್ಪನ ಜೊತೆ ಹಾಡುತ್ತಿದ್ದವಳು ಗಾಯನವನ್ನು ರೂಢಿಸಿಕೊಂಡೆ ಎಂದಷ್ಟೇ ಗೊತ್ತು.

◆ **ಸರಿಗಮಪ ಸ್ಪರ್ಧೆಗೆ ಆಯ್ಕೆಯಾದಾಗ ಗೆಲ್ಲುವ ಭರವಸೆ ಇತ್ತಾ?**

ಈ ಸ್ಪರ್ಧೆಯಲ್ಲಿ ಮೊದಲಿಗಳಾಗಿ ಹೊರಹೊಮ್ಮುತ್ತೇನೆ ಎನ್ನುವ ಕಲ್ಪನೆ ಇರಲಿಲ್ಲ. ಸ್ಪರ್ಧೆ ಮಾಡಬೇಕು ಎನ್ನುವ ಉತ್ಕಟವಾದ ತುಡಿತ ಮಾತ್ರ ಇತ್ತು. ಹಾಗಾಗಿ ಆಯ್ಕೆ ಆಗಿದ್ದೇ ನನಗೆ ತುಂಬ ಖುಷಿ ಕೊಟ್ಟಿತ್ತು. ಕರ್ನಾಟಕ ಶಾಸ್ತ್ರೀಯ ಸಂಗೀತವನ್ನು ಶಾಸ್ತ್ರಬದ್ಧವಾಗಿ ಕಲಿಯುತ್ತಿದ್ದೇನೆ. ನಾನು ಚೆನ್ನಾಗಿ ಹಾಡಿದ್ದರಿಂದ ಈ ಪುರಸ್ಕಾರ ಸಿಕ್ಕಿದೆ ಎಂದು ಅಂದುಕೊಳ್ಳುತ್ತೇನೆ. ನನ್ನ ಪರಿಶ್ರಮ ಮತ್ತು ಹಾಡುಗಾರಿಕೆಯ ಪ್ರೀತಿಗೆ ಸಿಕ್ಕ ಮನ್ನಣೆ ಎಂದು ಮಾತ್ರ ಭಾವಿಸುತ್ತೇನೆ.

◆ **ಟೀವಿಗೆ ಬಂದ ನಂತರ ಹೇಗಿತ್ತು?**

ಇದ್ದ ಆಸೆ ಕೈಗೂಡುತ್ತದೆ ಎಂದುಕೊಂಡಿರಲಿಲ್ಲ. ನನ್ನ ಪ್ರಯತ್ನಕ್ಕೆ ಆಕಸ್ಮಿಕವಾಗಿಯೇ ಅವಕಾಶ ಸಿಕ್ಕಿದೆ. ಆಡಿಷನ್‌ನಲ್ಲಿ ಆಯ್ಕೆ ಆಗಿದ್ದೇ ನನ್ನಲ್ಲಿ ಗೆಲುವಿನಷ್ಟು ಸಂಭ್ರಮವನ್ನು ತುಂಬಿತ್ತು. ನನ್ನ ಪೋಷಕರು, ಬಂಧುಗಳು ಅಪಾರ ಪ್ರೋತ್ಸಾಹದ ಮಾತುಗಳನ್ನು ಆಡಿ ಹುರಿದುಂಬಿಸಿದರು. ಒಳ್ಳೆಯ ಪ್ರತಿಕ್ರಿಯೆಗಳು ಸಿಕ್ಕವು. ಹೊರಗಡೆ ಜನ ನನ್ನನ್ನು ಗುರುತಿಸುತ್ತಿದ್ದರು. ಅಪರಿಚಿತರೂ ಪ್ರೀತಿಯನ್ನು ತೋರಿಸಿ ಬೆನ್ನು ತಟ್ಟಿದ್ದಾರೆ. ಟೀವಿಯಲ್ಲಿ ನನ್ನ ಹಾಡು ಪ್ರಸಾರವಾದ ನಂತರ ನಮ್ಮ ಬೀದಿಯ ಸಹವಾಸಿಗಳು ಮೆಚ್ಚಿ ಪ್ರೋತ್ಸಾಹಿಸಿದ್ದಾರೆ. ನಮ್ಮ ಪಕ್ಕದ ಮನೆಯ ಆಂಟಿ ಮನೆಗೆ ಬಂದು ಮುತ್ತುಕೊಟ್ಟು ಬೆನ್ನುತಟ್ಟಿದರು. ಇದೆಲ್ಲ ಸ್ಮರಣೀಯ.

◆ **ರಜೆಯಲ್ಲಿ ಏನು ಮಾಡುತ್ತಿದ್ದೀರಿ? ಮುಂದೆ ಏನು ಮಾಡುತ್ತೀರಿ?**

ಶಾಲೆಗೆ ಬೇಸಿಗೆ ರಜೆ ಇರುವುದರಿಂದ ಮನೆಯಲ್ಲೇ ಹಾಡುಗಳನ್ನು ಕಲಿಯುತ್ತಿದ್ದೇನೆ. ನಮ್ಮ ಮೇಡಂ ಹೇಳಿಕೊಡುವ ಪಾಠವನ್ನು ಅಭ್ಯಾಸ ಮಾಡುತ್ತೇನೆ. ಝೀ ಕನ್ನಡದಲ್ಲಿ ಹೇಳಿಕೊಟ್ಟ ಹಾಡುಗಳನ್ನು ಕಂಠಪಾಠ ಮಾಡುತ್ತಿದ್ದೇನೆ. ಇದರ ಜೊತೆಗೆ ಡ್ರಾಯಿಂಗ್, ಕ್ರಾಫ್ಟ್, ಮೆಹಂದಿ ಡಿಸೈನ್, ಹಾರ್ಮೋನಿಯಂ ನುಡಿಸುವುದು, ಪರಿಚಿತರೊಬ್ಬರು ಗಿಟಾರ್ ಗಿಫ್ಟ್ ಮಾಡಿದ್ದಾರೆ ಅದನ್ನೂ ಕಲಿಯುತ್ತಿದ್ದೇನೆ. ನನ್ನ ಗಮನ ಸಂಪೂರ್ಣ ಇರುವುದು ಹಾಡುಗಾರಿಕೆಯಲ್ಲಿ. ಅವಕಾಶ ಸಿಕ್ಕರೆ ರಾಗ ಸಂಯೋಜನೆಯನ್ನು ಮಾಡುವ ಅಪೇಕ್ಷೆ ಇದೆ. ಶಿಕ್ಷಣವನ್ನು ಮುಂದುವರಿಸುತ್ತೇನೆ. ಮುಂದೆ ಶಾಸ್ತ್ರಬದ್ಧವಾಗಿ ಸಂಗೀತದಲ್ಲಿಯೇ ಪದವಿಯನ್ನು ಪಡೆಯಬೇಕು. ಆಸಕ್ತ ಸಂಗೀತ ವಿದ್ಯಾರ್ಥಿಗಳಿಗೆ ಪಾಠವನ್ನು ಹೇಳಿಕೊಡುವುದು ಸಾರ್ಥಕ ಆಗುತ್ತದೆ. ಹಾಗಾಗಿ ಸಂಗೀತದಲ್ಲಿ ವಿದುಷಿ ಆಗಬೇಕು.

◆ **ನಿಮ್ಮ ಶಾಲೆಯ ಮಕ್ಕಳನ್ನು ಉದ್ದೇಶಿಸಿ ಮಾತನಾಡುವ ಸಂದರ್ಭ ಬಂದರೆ?**

ಶಾಲೆಯ ಸಹಪಾಠಿಗಳು ಮತ್ತು ಗೆಳೆಯ ಗೆಳತಿಯರು ಸ್ಪರ್ಧೆಯಲ್ಲಿ ಇದ್ದ ನನ್ನನ್ನು ಬೆಂಬಲಿಸಿದ್ದಾರೆ. ಪ್ರತಿ ಕಠಿನ ಹಾಡು ಕೇಳಿ ನನಗೆ ಸಂದೇಶಗಳನ್ನು ಕಳಿಸಿ ಖುಷಿಯ ಮಾತುಗಳನ್ನು ಹೇಳಿದ್ದಾರೆ. ಅವರ ಪ್ರೋತ್ಸಾಹಕ್ಕೆ ಮೊದಲು ಕೃತಜ್ಞತೆಗಳನ್ನು ಹೇಳುತ್ತೇನೆ. ಇಂತಹ ಬೇರೆ ಬೇರೆ ವೇದಿಕೆಗಳು ಇರುತ್ತವೆ. ಅವರೂ ಅಂತಹ ವೇದಿಕೆಯನ್ನು ಹತ್ತಬೇಕು ಎಂಬ ಆಶಯದಲ್ಲಿ ಎಲ್ಲರಿಗೂ ಅವಕಾಶ ಸಿಗುವಂತೆ ಆಗಲಿ ಎಂದು ಹಾರೈಸುತ್ತೇನೆ.

◆ **ಯಾವ ರೀತಿಯ ಹಾಡುಗಳು ಇಷ್ಟ**

ನಾನಾ ಪ್ರಕಾರದ ಹಾಡುಗಳು ಇವೆ. ಗಾಯಕಿಯಾಗಿ ಎಲ್ಲ ರೀತಿಯ ಹಾಡುಗಳನ್ನು ಹಾಡಲು ಇಷ್ಟಪಡುತ್ತೇನೆ. ವಾಸ್ತವದಲ್ಲಿ ಹಿನ್ನೆಲೆ ಗಾಯಕಿ ಆಗಬೇಕು ಎನ್ನುವ ಆಸೆ ನನ್ನದು. ಅದಕ್ಕೇ ಒತ್ತು ಕೊಡುತ್ತೇನೆ. ಹಿಂದೂಸ್ತಾನಿ ಕ್ಲಾಸಿಕಲ್, ಸೆಮಿ ಕ್ಲಾಸಿಕಲ್, ರಾಕ್ ಸ್ಟೈಲ್ ಕೂಡ ಹಾಡ್ತೀನಿ.

■ **ರಾಘವೇಂದ್ರ ಕೆ.**